# ಹಳ್ಳೂರ ಮತ್ತು ಯಾದವಾಡದಲ್ಲಿ ದಾಖಲೆ ರಹಿತ 2.70 ಲಕ್ಷ ರೂ ವಶ



ಮೂಡಲಗಿ: ತಾಲ್ಲೂಕಿನ ಹಳ್ಳೂರ ಕ್ರಾಸ್ ಬಳಿಯ ಹಾಗೂ ಯಾದವಾಡ ಚೆಕ್ ಪೋಸ್ಟ್‌ನಲ್ಲಿ ಶುಕ್ರವಾರದಂದು ದಾಖಲೆ ಇಲ್ಲದ ಒಟ್ಟು 2.70 ರೂ ಹಣವನ್ನು ಚುನಾವಣೆಯ ಎಫ್.ಎಸ್.ಟಿ ಮತ್ತು ಎಫ್.ಎಸ್.ಟಿ ತಂಡ ಹಾಗೂ ಪೊಲೀಸ್ ಸಿಬ್ಬಂದಿಗಳು ತಪಾಸಣೆ ವೇಳೆಯಲ್ಲಿ ವಶಪಡಿಸಿಕೊಂಡಿದ್ದಾರೆ.

ಹಳ್ಳೂರ ಚೆಕ್ ಘೋಸ್ಟದಲ್ಲಿ ಒಂದು ವಾಹನದಲ್ಲಿ 99 ಸಾವಿರ ಮತ್ತು ಇನ್ನೊಂದು ವಾಹನದಲ್ಲಿ 51 ಸಾವಿರ ದಾಖಲೆ ಇಲ್ಲದ ಒಟ್ಟು 1.50 ಲಕ್ಷ ಹಣ ಹಾಗೂ ಯಾದವಾಡ ಬಳಿಯ ಚೆಕ್‌ಪೋಸ್ಟ್ ದಲ್ಲಿ 60 ಸಾವಿರ ಮತ್ತೊಂದು ವಾಃನದಲ್ಲಿ 60 ಸಾವಿರ ರೂ ಹಣವನ್ನು ತಪಾಸಣೆ ವೇಳೆಯಲ್ಲಿ ಎಸ್‌ಎಸ್‌ಟಿ ತಂಡದವರು ಜಪ್ತಿ ಮಾಡಿ ವಶಕ್ಕೆ ಪಡೆದುಕೊಂಡಿರುವರು.

ಹಳ್ಳೂರ ಚೆಕ್ ಪೋಸ್ಟ್‌ದಲ್ಲಿ ಎಫ್.ಎಸ್.ಟಿ ತಂಡದ ಎಚ್.ಬಿ.ಚಿಕೂನ್, ಐ.ಎಸ್.ಬಡಿಗೇರ, ಪೊಲೀಸ್ ಸಿಬ್ಬಂದಿ ಎಂ.ವಿ. ಮುರನಾಳ, ಆನಂದ ಗೌಡರ, ಎಸ್‌ಎಸ್‌ಟಿ ತಂಡದ ಉದಯಕುಮಾರ ಬೆಳ್ಳುಂಡಗಿ, ಶ್ರವಣಕುಮಾರ ಹುಬ್ಬಳ್ಳಿ, ಬಸಪ್ಪ ಪಾಟೀಲ ಮತ್ತು ಯಾದವಾಡ ಚೆಕ್‌ಪೋಸ್ಟ್ ಎಫ್‌ಎಸ್‌ಟಿ ತಂಡ ಎಚ್.ಎಲ್. ಬಸಳಿಗುಂದಿ, ಎಚ್.ಬಿ, ಝುರೆ, ಎಸ್‌ಎಸ್‌ಟಿ ತಂಡದ ಎಸ್.ಆರ್. ದೇವರ, ಎಸ್. ಮಳ್ಳಪ್ಪಗೊಳ, ಪಿ.ತೊಂಡಿಕಟ್ಟಿ ಇದ್ದರು.

# ಶ್ರೀ ಸಾಯಿ ಪಿಯು ಕಾಲೇಜಿಗೆ ಶೇ.95 ರಷ್ಟು ಫಲಿತಾಂಶ



















ಮೂಡಲಗಿ: ಪಟ್ಟಣದ ಶ್ರೀ ಸಾಯಿ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ ಫಲಿತಾಂಶವು ಶೇ.95 ಹೊಂದಿದೆ ಎಂದು ಕಾಲೇಜಿನ ಪ್ರಾಚಾರ್ಯ ಪ್ರವೀಣ .ಎಂ. ಕುಲಗೋಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಸೋನಾಲಿ ಮಗದುಮ್ ಶೇ.97 ಪ್ರಥಮ, ಪ್ರಿಯಾಂಕಾ ಹಿಪ್ಪರಗಿ ಶೇ.94.80 ದ್ವಿತೀಯ, ಪ್ರಜ್ವಲ್ ಅಕ್ಕಿಸಾಗರ ಶೇ.94.54 ತೃತೀಯ, ಮತ್ತು ವಾಣಿಜ್ಯ ವಿಭಾಗದಲ್ಲಿ ಸ್ವಾತಿ ಕೌಜಲಗಿ ಶೇ.96 ಪ್ರಥಮ, ರಾಜಶ್ರೀ ನಾಯಕ ಶೇ.96 ದ್ವಿತೀಯ, ಸುನೀತಾ ಬೆಣ್ಣಿ ಶೇ.95.50 ತೃತೀಯ ಹಾಗೂ ಕಲಾ ವಿಭಾಗದಲ್ಲಿ ಗಂಗವ್ವಾ ಜೊತೆನ್ನವರ ಶೇ.96 ಪ್ರಥಮ, ಗೀತಾ ಗೌರೋಜಿ ಮತ್ತು ಯಲ್ಲವ್ವಾ ಮರ್ದಿ ಶೇ.95 ದ್ವಿತೀಯ, ಸೃಷ್ಠಿ ನಾಯಿಕವಾಡಿ ಶೇ.94 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಪರೀಕ್ಷೆ ಬರೆದ 380 ವಿದ್ಯಾರ್ಥಿಗಳಲ್ಲಿ 82 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 212 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 48 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳನ್ನು ಕಾಲೇಜಿನ ಚೇರಮನ್ ಪುಲಕೇಶ ಸೋನವಾಲ್ಕರ್, ಆಡಳಿತ ಮಂಡಳಿ, ಪ್ರಾಚಾರ್ಯ ಪ್ರೊ. ಪ್ರವೀಣ ಕುಲಗೋಡ ಮತ್ತು ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಬಿಜೆಪಿ ಕೆಲಸ ನೋಡಿದ್ದೀರಿ, ನನಗೊಂದು ಅವಕಾಶ ಕೊಡಿ–ಮೃಣಾಲ ಹೆಬ್ಬಾಳಕರ್



ಬೆಳಗಾವಿ : ಕಳೆದ 20 ವರ್ಷ ಬಿಜೆಪಿಗೆ ಅಧಿಕಾರ ಕೊಟ್ಟು ನೋಡಿದ್ದೀರಿ. ಈ ಬಾರಿ ನನಗೆ ಅವಕಾಶ ಮಾಡಿಕೊಡಿ. ನಿಮ್ಮ ವಿಶ್ವಾಸಕ್ಕೆ ತಕ್ಕಂತೆ ಕೆಲಸ ಮಾಡಿ ತೋರಿಸುತ್ತೇನೆ ಎಂದು ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಹೇಳಿದರು.

ಬೆಳಗಾವಿ ಲೋಕಸಭಾ ಚುನಾವಣೆಯ ಪ್ರಚಾರಾರ್ಥ ಮಾರ್ಕಂಡೇಯ ನಗರದಲ್ಲಿ ಶುಕ್ರವಾರ ಪ್ರಚಾರ ಕೈಗೊಂಡು ಅವರು ಮಾತನಾಡಿದರು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಕೆಲಸಗಳು ಭಿನ್ನವಾಗಿರುತ್ತವೆ. ಕೇಂದ್ರದಿಂದ ದೊಡ್ಡ ದೊಡ್ಡ ಯೋಜನೆಗಳನ್ನು ತರಲು ಅವಕಾಶವಿರುತ್ತದೆ. ಇದರಿಂದ ನಮ್ಮ ಪ್ರದೇಶದ ಅಭಿವೃದ್ಧಿಯಾಗುತ್ತದೆ, ಯುವಕರಿಗೆ ಉದ್ಯೋಗ ಸಿಗುತ್ತದೆ. ಆದರೆ ಕಳೆದ 4 ಅವಧಿಯಲ್ಲಿ ಬೆಳಗಾವಿಯನ್ನು ಪ್ರತಿನಿಧಿಸಿದ ಸಂಸದರಿಂದ ಜನರು ನಿರೀಕ್ಷೆ ಮಾಡಿದ್ದಷ್ಟು ಕೆಲಸಗಳಾಗಿಲ್ಲ. ಯಾರದ್ದೋ ಮುಖ ನೋಡಿ ಮತ ಹಾಕುವುದಕ್ಕಿಂತ ನಮ್ಮಿಂದ ಆಯ್ಕೆಯಾದವರು ನಮಗೆ ಏನು ಮಾಡಬಲ್ಲರು ಎನ್ನುವುದನ್ನು ಯೋಚಿಸಬೇಕು ಎಂದು ಅವರು ಹೇಳಿದರು.

ನಾನು ವಿದ್ಯಾವಂತನಾಗಿದ್ದು, ಕ್ಷೇತ್ರದ ಅಭಿವೃದ್ಧಿಯ ಸ್ಪಷ್ಟ ಕಲ್ಪನೆ ಇದೆ. ನಮ್ಮೂರಿನ ಮಕ್ಕಳ ಇಲ್ಲೇ ಉದ್ಯೋಗ ಮಾಡಿದರೆ ತಂದೆ, ತಾಯಿಗಳಿಗೂ ಆಸರೆಯಾಗುತ್ತಾರೆ. ಅಂತಹ ಅವಕಾಶ ಕಲ್ಪಿಸಲು ಉದ್ಯೋಗ ಸೃಷ್ಟಿಗೆ ಮೊದಲ ಆದ್ಯತೆ ನೀಡುತ್ತೇನೆ. ಯುವಕರು ಉದ್ಯಮಿಗಳಾಗಲು ಪ್ರೋತ್ಸಾಹ ಮತ್ತು ತರಬೇತಿ ಒದಗಿಸಲಾಗುವುದು. ಶೈಕ್ಷಣಿಕ ಅವಕಾಶಗಳನ್ನೂ ಕಲ್ಪಿಸಲಾಗುವುದು. ಹಾಗಾಗಿ ಕಾಂಗ್ರೆಸ್ ಪಕ್ಷದ ಚಿಹ್ನೆಯಾಗಿರುವ ಹಸ್ತಕ್ಕೆ ಮತ ನೀಡುವ ಮೂಲಕ ಈ ಬಾರಿ ನನಗೆ ಅವಕಾಶ ಮಾಡಿಕೊಡಿ ಎಂದು ಅವರು ವಿನಂತಿಸಿದರು.

ಗ್ರಾಮದ ಹಿರಿಯರು ತಲೆಯ ಮೇಲೆ ಕೈ ಇಟ್ಟು ಆಶೀರ್ವಾದ ಮಾಡಿದರು. ಖಂಡಿತ ನಮ್ಮೆಲ್ಲರ ಮತವನ್ನು ನಿಮಗೆ ನೀಡುತ್ತೇವೆ ಎಂದು ಭರವಸೆ ನೀಡಿದರು. ಈ ಸಮಯದಲ್ಲಿ ಸ್ಥಳೀಯ ನಿವಾಸಿಗಳು, ಹಿರಿಯರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಗೋಕಾಕ್,ಅರಭಾವಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುನ್ನಡೆ ಖಚಿತ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಗೋಕಾಕ್ ಹಾಗೂ ಅರಭಾವಿ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುನ್ನಡೆ ಸಿಗುವುದು ಗ್ಯಾರಂಟಿ. ಕಾರ್ಯಕರ್ತರು ವಿಶ್ವಾಸದಿಂದ ಕೆಲಸ ಮಾಡಿದರೆ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸುಲಭ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಬೆಳಗಾವಿಯ ಗೃಹ ಕಚೇರಿಯಲ್ಲಿ ಶುಕ್ರವಾರ ನಡೆದ ಗೋಕಾಕ್ ಹಾಗೂ ಅರಭಾವಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಸಚಿವರು, ಸೋಮವಾರ (ಏಪ್ರಿಲ್ 15) ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ನಾಮಪತ್ರ ಸಲ್ಲಿಸುತ್ತಿದ್ದು, ಈ ಎರಡು ಕ್ಷೇತ್ರಗಳಿಂದ ಹೆಚ್ಚು ಜನರು ಆಗಮಿಸಲಿದ್ದಾರೆ ಎಂದರು.

ಪಕ್ಷ ಸಂಘಟಿಸಿ, ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಿ, ಮತದಾರರಿಗೆ ಸರ್ಕಾರದ ಸಾಧನೆಗಳನ್ನು ತಿಳಿಹೇಳಬೇಕು. ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಉತ್ತಮ ವಾತಾವರಣವಿದ್ದು, ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಗೆಲುವಿಗೆ ಎಲ್ಲರೂ ಒಗ್ಗಟ್ಟಿನಿಂದ ದುಡಿಯಬೇಕು ಎಂದು ಕರೆ ನೀಡಿದರು. ಎರಡು ಕ್ಷೇತ್ರಗಳಲ್ಲೂ ಬೂತ್ ಕಮಿಟಿ ರಚಿಸಬೇಕು. 15 ಜನರಂತೆ ಪ್ರತಿ ಬೂತ್ ಕಮಿಟಿ ರಚಿಸಬೇಕು. ಇನ್ನು ಮೂರು ದಿನಗಳಲ್ಲಿ ಕಮಿಟಿ ಸದಸ್ಯರ ಹೆಸರನ್ನು ನೀಡಬೇಕು. ಯಾರಿಗೂ ಹೆದರದೇ ಕ್ಷೇತ್ರದಲ್ಲಿ ಪಕ್ಷ ಸಂಘಟಿಸಿ ಎಂದು ಸಚಿವರು ಕರೆ ನೀಡಿದರು.

ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಶಕ್ತಿ ತುಂಬಬೇಕು. ಮೃಣಾಲ್ ಹೆಬ್ಬಾಳ್ಕರ್ ಗೆದ್ದರೆ ಲಕ್ಷ್ಮೀ ಹೆಬ್ಬಾಳ್ಕರ್ ಗೆದ್ದಂತೆ ಎಂದು ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ ಹೇಳಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಓರ್ವ ನಿಸ್ವಾರ್ಥ ರಾಜಕಾರಣಿ, ಎಲ್ಲರೂ ಒಗ್ಗೂಡಿ ಚುನಾವಣೆ ಎದುರಿಸೋಣ. ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಇನ್ನೂ ಯುವಕನಾಗಿದ್ದು, ಗೆದ್ದರೆ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ದುಡಿಯಲಿದ್ದಾನೆ ಎಂದು ಭರವಸೆ ನೀಡಿದರು. ಕಾಂಗ್ರೆಸ್ ಸರ್ಕಾರ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಾಲ್ಕು ವರ್ಷಗಳ ಬಳಿಕವೂ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಭೆಯಲ್ಲಿ ಮುಖಂಡರಾದ


ಹಗಲಿರುಳು ದುಡಿಯಲಿದ್ದಾನೆ ಎಂದು ಭರವಸೆ ನೀಡಿದರು. ಕಾಂಗ್ರೆಸ್ ಸರ್ಕಾರ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಾಲ್ಕು ವರ್ಷಗಳ ಬಳಿಕವೂ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಭೆಯಲ್ಲಿ ಮುಖಂಡರಾದ ಡಾ.ಮಹಾಂತೇಶ್ ಕಡಾಡಿ, ಅನಿಲಕುಮಾರ ದಳವಾಯಿ, ಚಂದನ ಗಿಡ್ನವರ್, ರಮೇಶ್ ಉಟಗಿ, ಭರಮಣ್ಣ ಉಪ್ಪಾರ್, ಕಲ್ಲಪ್ಪಗೌಡ ಲಕ್ಕಾರ್, ರಾವಸಾಹೇಬ ಬೆಳಕೋಡು, ಬಸವರಾಜ ಬೆಳಕೋಡು, ಎಸ್.ಆರ್ ಸೋನವಾಲ್ಕರ್, ಸಂಜಯ ಪೂಜಾರಿ, ಗಂಗಾಧರ್ ಬಡಕುಂದ್ರಿ, ಪ್ರಕಾಶ ಅರಳಿ, ಶಂಕರ ಹುರಕಡ್ಲಿ, ಭರಮಣ್ಣ ಉಪ್ಪಾರ, ಪ್ರಕಾಶ ಡಾಂಗೆ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಸರ್ವ ಧರ್ಮ ಸಮಭಾವ ಎಂದು ಭಾವೈಕ್ಯ ಮೆರೆದ ನಾಗಣಸೂರಿನ ತುಪ್ಪಿನ ಮಠ

ವಿಶ್ವದಾದ್ಯಂತ ರಮ್ಜಾನ ಇದು ಮುಸಲ್ಮಾನರ ಪ್ರಮುಖ ಹಬ್ಬ ಎಂದು ಪರಿಗಣಿಸಲಾಗುತ್ತೆ. ಈ ಹಬ್ಬದಂದು ಅವರು ಬಗೆ ಬಗೆಯ ತಿಂಡಿ ತಿನುಸುಗಳನ್ನ ಮಾಡಿ, ಪ್ರಮುಖವಾಗಿ ಅವರ ಈ ರಮ್ಜಾನ ಹಬ್ಬದ ವಿಶೇಷವಾದ ಶಿರಖುರ್ಮಾ ಮಾಡಿ ತಮ್ಮ ಸಂಬಂಧಿಕರಿಗೆ ಸ್ನೇಹಿತರಿಗೆ, ನೆರೆಹೊರೆಯವರಿಗೆ ಉಣಬಡಿಸಿ ತಮ್ಮ ಹಬ್ಬವನ್ನು ಆಚರಿಸುತ್ತಾರೆ. ಆದರೆ ಮಹರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ನಾಗಣಸೂರಿನ ತುಪ್ಪಿನ ಮಠದಲ್ಲಿ ಪ್ರತಿ ರಮಜಾನ ಹಬ್ಬದಂದು ಮುಸಲ್ಮಾನ ಭಕ್ತರಿಗೆ ಹೋಳಿಗೆ ತುಪ್ಪಿನ ಪ್ರಸಾದ ನೀಡಿ ಸಮಾನತೆಯಲ್ಲಿ ಐಕ್ಯತೆ ಮೆರೆಯುತ್ತದೆ. ಶ್ರೀ ಜಗದ್ಗುರು ಬಸವಲಿಂಗ ಮಹಾಶೀವಯೋಗಿಗಳವರ ತುಪ್ಪಿನಮಠದಲ್ಲಿ ಮುಸಲ್ಮಾನ ಭಕ್ತರು ತಮ್ಮ ಹಬ್ಬದ ಪ್ರಸಾದವನ್ನು ತಂದು ಊರಿನ ಜನರಿಗೆ ಮತ್ತು ತಮ್ಮ ಬಳಗದವರನ್ನು ಕರೆತಂದು ನಾವೆಲ್ಲರು ಶ್ರೀ ಜಗದ್ಗುರು ಬಸವಲಿಂಗ ಶಿವಯೋಗಿಗಳವರ ಭಕ್ತರು ನಮಗೆ ಯಾವ ಭೇದ ಭಾವ ಇಲ್ಲ ನಾವೆಲ್ಲರು ಒಂದೇ ಎಂದು ಹೇಳಿಕೊಂಡು ಶ್ರೀ ಮಠದಲ್ಲಿ ರಮಜಾನ ಹಬ್ಬವನ್ನು ಆಚರಿಸುತ್ತಾರೆ. ಇದಕ್ಕೆ ಶ್ರೀ ಮಠದ ನೂತನ ಪೀಠಾಧಿಪತಿಗಳಾದ ಹಿಮಾಲಯಯೋಗಿ ಡಾ|ಅಭಿನವ ಬಸವಲಿಂಗ ಮಹಾಸ್ವಾಮಿಗಳು ಚಾಲನೇ ನೀಡಿ ಪ್ರತಿಯೊಬ್ಬ ಭಕ್ತರಿಗೆ ತಾವೇ ಸ್ವತಃ ಪ್ರಸಾದವನ್ನು ನೀಡುತ್ತಾರೆ. "ಕಾಯ ಆಳಿದರು ಕಿರ್ತಿ ಅಳಿಯದು" ಎಂಬ ಗುರುವಾಣಿಯು ಮನದಲ್ಲಿ ಸದಾ ಸ್ಮರಿಸುತ್ತಾ ಸಮಾಜದ ಏಳಿಗೆಗಾಗಿ ಸದಾ ಹಸನ್ಮುಖದಿಂದ ತಮ್ಮ ಕಾಯಕ ಮಾಡುತ್ತಿರುವ ಡಾ|| ಅಭಿನವ ಬಸವಲಿಂಗ ಮಹಾಸ್ವಾಮಿಗಳು ಜಾತಿ ಜಮಾತಿ ಎಂಬುದು ನಾವು ಮಾಡಿಕೊಂಡಿರುವುದು ಅಷ್ಟೇ ಒಳ್ಳೆಯದು ಮಾಡುವವರಿಗೆ ಯಾವ ಜಾತಿ ಜಮಾತಿ ಇರುವುದಿಲ್ಲ .ಮುಸಲ್ಮಾನರಲ್ಲಿ ಒಳ್ಳೆಯವರು ಇದ್ದಾರೆ ಅವರ ಒಳ್ಳೆಯತನವನ್ನು ನೊಡೋಣ ಅವರೊಂದಿಗೆ ಅಣ್ಣ– ತಮ್ಮಂದಿಯರ ತರ ಇರೋಣ ಎಂದು ಹೇಳಿದ್ದರು. ಸರ್ವ ಧರ್ಮ ಸಮಭಾವ ನಾವೆಲ್ಲರು ಒಂದೆ ಇರುವೇವು, ದೇವರು ಒಬ್ಬನೆ ಆದರೆ ಆತನಿಗೆ ನಾಮಗಳು ಹಲವು ಇವೇ ಎಂದು ತಿಳಿಸಿದರು. ಮಹಾರಾಷ್ಟ್ರ & ಕರ್ನಾಟಕದ ಗಡಿಭಾಗದ ಮೇಲೆ ನಡೆಯುವ ಒಂದು ದೊಡ್ಡ ಜಾತ್ರೆ ಶ್ರೀ ಜಗದ್ಗುರು ಬಸವಲಿಂಗ ಶಿವಯೋಗಳವರ ಪೂಣ್ಯಸ್ಮರಣೋತ್ಸವದಲ್ಲಿ ಸುಮಾರು 4 ರಿಂದ 5 ಲಕ್ಷ ಭಕ್ತರು ಬರುತ್ತಾರೆ. ಆಗ ಅವರಿಗೆಲ್ಲ ಪ್ರಸಾದ ನೀಡುವಲ್ಲಿ ಮುಸಲ್ಮಾನ ಭಕ್ತರು ಸಹ ಭಾಗಿಯಾಗಿ ತುಪ್ಪಿನಮಠದ ತುಪ್ಪಿನ ಜಾತ್ರೆಗೆ ಅವರದು ಒಂದು ಮಹತ್ವದ ಸೇವೆ ಇರುತ್ತದೆ ಎಂದು ಹೇಳಿದರು. ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ, ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ, ಮನಗಳಲ್ಲಿ ಮನೆಗಳಲ್ಲಿ ಮತಗಳಲ್ಲಿ, ಪರಿವರ್ತನೆಗಾಗಿ, ಮನಸ್ಸುಗಳ ಅಂತರಂಗದ ಚಳವಳಿ ಇದುವೆ ಸಮಾನತೆ ಎಂದು ಹೇಳಿರುವ ಪೂಜ್ಯ ಶ್ರೀಗಳವರ ಮಾತು ಅಲ್ಲಿರುವ ಮುಸಲ್ಮಾನರ ಕಣ್ಣಲಿ ನೀರು ತರಿಸಿತು.

# ಸಮಾಜ ಸುಧಾರಕ, ಕ್ರಾಂತಿಕಾರಿ ಚಿಂತಕ ಜ್ಯೋತಿಬಾ ಫುಲೆ

ಜ್ಯೋತಿಬಾ ಗೋವಿಂದ್‌ರಾವ್ ಫುಲೆ 19 ನೇ ಶತಮಾನ ಕಂಡ ಸಮಾಜ ಸುಧಾರಕ, ಕ್ರಾಂತಿಕಾರಿ ಚಿಂತಕ ಮತ್ತು ಬರೆಹಗಾರ. ಅಸ್ಪೃಶ್ಯತಾ ನಿವಾರಣೆ, ಮೂಢನಂಬಿಕೆಗಳ ವಿರುದ್ಧ ಜಾಗೃತಿ, ಶಿಕ್ಷಣ, ಕೃಷಿ, ಜಾತಿವಿನಾಶದಂತಹ ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಜ್ಯೋತಿರಾವ್ ಫುಲೆ ಮತ್ತು ಅವರ ಪತ್ನಿ ಸಾವಿತ್ರಿಬಾಯಿ ಅವರ ಹೆಸರು ಪ್ರಮುಖವಾದದ್ದು. ಮಹಾರಾಷ್ಟ್ರದ ಸತಾರ ಜಿಲ್ಲೆಯ ಕಟ್ಗುನ್ ಎಂಬಲ್ಲಿ 1827ರ ಏಪ್ರಿಲ್ 11 ರಂದು ಜನಿಸಿ ಜ್ಯೋತಿಬಾ ಎಂದು ಹೆಚ್ಚು ಪರಿಚಿತರವರು ಜ್ಯೋತಿರಾವ್ ಫುಲೆ. ಅವರ ತಂದೆ ಗೋವಿಂದರಾವ್ ತರಕಾರಿ ಮಾರಾಟ ಮಾಡುತ್ತಿದ್ದರು. 9 ತಿಂಗಳಿರುವಾಗಲೇ ತಾಯಿಯನ್ನು ಕಳೆದುಕೊಂಡ ಫುಲೆ, ತಂದೆಗೆ ಕೃಷಿ ಕೆಲಸದಲ್ಲಿ ಸಹಾಯ ಮಾಡಿಕೊಂಡಿದ್ದರು. ಅವರನ್ನು ಚಿಕ್ಕಂದಿನಿಂದ ಸಾಕಿ ಬೆಳೆಸಿದ ಸೋದರ ಸಂಬಂಧಿ ಅಕ್ಕ ಸಗುಣ ಬ್ರಿಟಿಷ್ ಆಫೀಸರನೊಬ್ಬನ ಮಗನಿಗೆ ನ್ಯಾನಿ ಆಗಿ ಕೆಲಸ ಮಾಡುತ್ತಿದ್ದಾಕೆ. ಇಂಗ್ಲಿಷ್ ಬರುತ್ತಿದ್ದ ಆಕೆ ಜ್ಯೋತಿರಾವ್ ಅವರನ್ನು ಶಿಕ್ಷಣದೆಡೆಗೆ ಸೆಳೆದಳು. ಬಾಲಕ ಫುಲೆ ಸ್ಕಾಟಿಷ್ ಮಿಷನ್ ಹೈಸ್ಕೂಲಿಗೆ ಸೇರಿದರು. ಜ್ಯೋತಿಬಾ ಅವರು 12 ವರ್ಷದವರಾಗಿದ್ದಾಗ 9 ವರ್ಷದ ಸಾವಿತ್ರಿ ಬಾಯಿ ಜೊತೆ ಮದುವೆಯಾಯಿತು.



ಮುಂದೆ ಜ್ಯೋತಿಬಾ ಫುಲೆ ಅಧ್ಯಾಪಕರಾದರು. ಸತತ ಓದುವ ಹವ್ಯಾಸ ಉಳ್ಳ ಅವರು ಶಿವಾಜಿ ಮತ್ತು ಜಾರ್ಜ್ ವಾಶಿಂಗ್‌ಟನ್ ಜೀವನ ಚರಿತ್ರೆ ಓದಿ ಪ್ರಭಾವಿತರಾದವರು. ಶಿವಾಜಿ ಬಗ್ಗೆ ಪುಸ್ತಕ ಬರೆದರು. ಅಮೆರಿಕದ ಲೇಖಕ ಥಾಮಸ್ ಪೇನ್‌ನ 'ರೈಟ್ಸ್ ಆಫ್ ಮ್ಯಾನ್' ಓದಿ ಮಾನವನ ಹಕ್ಕು ಸ್ವಾತಂತ್ರ್ಯಗಳ ವಿಚಾರ ತಿಳಿದುಕೊಂಡಿದ್ದರು. ಜಾತಿಗಳ ಮೇಲು–ಕೀಳು ಭಾವನೆ, ಶೂದ್ರ–ಅತಿ ಶೂದ್ರರ ದೀನ ಸ್ಥಿತಿಗೆ ಕಾರಣವಾದ ಸಾಮಾಜಿಕ ಚೌಕಟ್ಟನ್ನು ತೀವ್ರ ಪೂರ್ತಿ ಬದಲಾಯಿಸಲು ಅವರು ನಿರ್ಧರಿಸಿ 1873ರಲ್ಲಿ ಸತ್ಯಶೋಧಕ ಸಮಾಜ ಸ್ಥಾಪಿಸಿದರು. ಅದರ ಶಾಖೋಪಶಾಖೆಗಳನ್ನು ಬೆಳೆಸಿದರು.

ಕೆಳಜಾತಿಯು ಮಹಿಳೆಯುರಿಂದಲೇ ಆರಂಭಿಸಿ ಶಿಕ್ಷಣ ವ್ಯಾಪಕವಾಗಬೇಕೆಂದು ಅವರೇ ಪುಣೆಯಯಲ್ಲಿ ತಳಹದಿಯಾಗಿ ಮಹಿಳೆಯರಿಗೆ ಒಂದು ಶಾಲೆ ಆರಂಭಿಸಿ (1851) ತಮ್ಮ ಪತ್ನಿಯನ್ನೇ (ಸಾವಿತ್ರಿ ಬಾಯಿ) ಅಧ್ಯಾಪಕಿಯಾಗಿ ಮಾಡಿದರು. ಈ ಬಗ್ಗೆ ಸಮಾಜದ ಹಲವರು ಜ್ಯೋತಿಬಾರ ತಂದೆಯ ಕಿವಿಹಿಂಡಲು ಜ್ಯೋತಿಬಾ ತಂದೆಯ ಮನೆ ತ್ಯಜಿಸಿ ಪ್ರತ್ಯೇಕ ಸಂಸಾರ ಮಾಡಿದರು. ಮುಂದೆ ರಾಸ್ತಾಪೇಟ್, ವಿಠಲಪೇಟೆಗಳಲ್ಲೂ ಇಂಥ ಮಹಿಳೆಯರ ಶಾಲೆ ತೆರೆದರು. ರೈತರಿಗೂ ಮಹಿಳೆಯರಿಗೂ ತಮ್ಮ ಮನೆಯಲ್ಲೇ ರಾತ್ರಿ ಶಾಲೆ ತೆರೆದರು. ಇಂಗ್ಲಿಷ್ ಶಿಕ್ಷಣ, ತಾಂತ್ರಿಕ ಶಿಕ್ಷಣ ವಿಸ್ತರಣೆ ಆಗಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಅಸ್ಪೃಶ್ಯತೆ, ಜಾತಿಭೇದ, ಬಾಲ್ಯವಿವಾಹಗಳ ವಿರುದ್ಧ ಬಲವಾಗಿ ಪ್ರತಿಪಾದಿಸಿದರು. ಆಗಿನ ಸಮಾಜ ಸುಧಾರಕರಾದ ರಾನಡೆ, ಪ್ರೊ. ಭಂಡಾರಕರ್, ವಿಷ್ಣು ಶಾಸ್ತ್ರಿ ಚಿಪಳೋಣ್‌ಕರ್ ಇವರೆಲ್ಲ ಅವರ ವಿಚಾರಗಳಿಗೆ ಬೆಂಬಲ ಸೂಚಿಸಿದರು. ಭೋಕಾರ್‌ವಾಡಿ (ಪುಣೆಯ ಒಂದು ಬಡಾವಣೆ) ಎಂಬಲ್ಲಿ ಸರಕಾರ ಇವರಿಗೆ ಒಂದು ವಿಶಾಲ ನಿವೇಶನ ನೀಡಲು ಅಲ್ಲಿ ಅಸ್ಪೃಶ್ಯರಿಗಾಗಿ ಒಂದು ಶಾಲೆ ಆರಂಭಿಸಿದರು. ಬೆಳಗಾವಿಯಲ್ಲಿ ಹಾಗೂ ಚಿಕ್ಕೋಡಿ (1911) ನಿಪ್ಪಾಣಿ ಇಲ್ಲೆಲ್ಲ ಸತ್ಯಶೋಧಕ ಸಮಾಜದ ಶಾಖೆಗಳಾದವು. 'ವಿದ್ಯೆ ಹೀನನಿಗೆ ಮತಿಯಿಲ್ಲ; ಮತಿಯಿಲ್ಲದೆ ನೀತಿಯಿಲ್ಲ; ನೀತಿಯಿಲ್ಲದೆ ಗತಿಯಿಲ್ಲ; ಗತಿಯಿಲ್ಲದೆ ಹಣವಿಲ್ಲ; ಹಣವಿಲ್ಲದೆ ಶೂದ್ರ ಕೀಳಾದ; ಇಷ್ಟೆಲ್ಲ ಅನರ್ಥವನ್ನು ಅವಿದ್ಯೆ ಒಂದೇ ಉಂಟುಮಾಡಿದೆ' ಎಂದು ಹೇಳಿದ ಫುಲೆಯವರು ಶಿಕ್ಷಣದ ಮಹತ್ವವನ್ನು ತಳಸಮುದಾಯಗಳಿಗೆ ತಿಳಿಸಿಕೊಡುವತ್ತ ಆಸಕ್ತಿ ವಹಿಸಿದರು.

ಫುಲೆಯವರ ಕೆಲಸಗಳಲ್ಲಿ ಅವರ ಪತ್ನಿಯ ಸಹಭಾಗಿತ್ವವಿತ್ತು. ಮಹಿಳೆಯರಿಗೆ ಶಾಲೆ ತೆರೆದಿದ್ದೇ ಅಲ್ಲದೆ ವಿಧವಾ ಮರುವಿವಾಹ ಶುರುಮಾಡಿದರು. 1854ರಲ್ಲಿ ವಿಧವೆಯರಿಗೆ ಆಶ್ರಯಸದನ ತೆರೆದರು. ಹೆಣ್ಣು ಶಿಶು ಹತ್ಯೆ ತಡೆಯಲು ನವಜಾತ ಶಿಶುಗಳನ್ನು ಸಾಕಬಹುದಾದ ಶಿಶುಭವನ ತೆರೆದರು. ಸಮಾಜದ ಕೆಳವರ್ಗದ ಜನರ ವಿರುದ್ಧ ತಾರತಮ್ಯ ತೊಡೆದುಹಾಕಲು ತಮ್ಮ ಮನೆಯನ್ನು ಎಲ್ಲರಿಗೂ ಮುಕ್ತವಾಗಿ ತೆರೆದಿದ್ದೇ ಅಲ್ಲದೆ ತಮ್ಮ ಬಾವಿಯಿಂದ ನೀರು ಸೇದುವ ಅವಕಾಶವನ್ನು ಮುಕ್ತವಾಗಿ ಎಲ್ಲರಿಗೂ ನೀಡಿದರು. ಫುಲೆ 1876 ರಿಂದ 1882 ವರೆಗೆ ಪುಣೆ ಮುನಿಸಿಪಾಲಿಟಿ ಸದಸ್ಯರಾಗಿದ್ದರು. ಸ್ವಾತಂತ್ರ್ಯ, ಸಮಾನತೆ, ಸೋದರತೆ, ಮಾನವ ಘನತೆ, ಆರ್ಥಿಕ ನ್ಯಾಯದ ಆಧಾರದ ಮೇಲೆ ಹೊಸ ಸಮಾಜ ಕಟ್ಟಬಯಸುವುದಾದರೆ ಶೋಷಣೆ ಮತ್ತು ಅಸಮಾನತೆಯೇ ಮೂಲತತ್ವವಾದ ಹಳೆಯ ವ್ಯವಸ್ಥೆಯನ್ನು ಛಿದ್ರಗೊಳಿಸಲೇಬೇಕೆನ್ನುವುದು ಅವರ ಅಭಿಮತವಾಗಿತ್ತು.

1873 ರಲ್ಲಿ ಫುಲೆ ತಮ್ಮ ಬೆಂಬಲಿಗರೊಂದಿಗೆ ಸತ್ಯಶೋಧಕ ಸಮಾಜವನ್ನು ಕಟ್ಟಿದಾಗ ಸಾವಿತ್ರಿ ಬಾಯಿ ಅದರ ಮುಖ್ಯಸ್ಥರಾದರು. ಅಷ್ಟೇ ಅಲ್ಲ, ಅದರಲ್ಲಿ 90 ಜನ ಸದಸ್ಯೆಯರೂ ಇದ್ದರು. ಶಾಲೆಯ ಉಪಾಧ್ಯಾಯಿನಿಯಾಗಿ ಆಕೆ ಅವಿಶ್ರಾಂತವಾಗಿ ದುಡಿದರು. ಸತ್ಯಶೋಧಕ ಚಳುವಳಿಯ ಮುಖವಾಣಿಯಾಗಿ 'ದೀನಬಂಧು ಪ್ರಕಾಶನ ಶುರುವಾಯಿತು. 1873 ರಲ್ಲಿ ಪ್ರಕಟವಾದ ಅವರ 'ಗುಲಾಮಗಿರಿ' ಎಂಬ ಪುಸ್ತಕವನ್ನು ಗುಲಾಮಗಿರಿಯನ್ನು ತೊಡೆದುಹಾಕಲು ಪ್ರಯತ್ನಿಸಿದ ಅಮೆರಿಕದ ಜನತೆಗೆ ಅರ್ಪಿಸಿದ್ದರು.

ಹೀಗೆ ಫುಲೆಯವರಿಂದ ಶುರುವಾದ ಚಳುವಳಿಯಲ್ಲಿ ಅನೇಕರು ಭಾಗವಹಿಸಿ ನೇರವಾಗಿ ಪ್ರಭಾವಿತರಾದರೆ ಪರೋಕ್ಷವಾಗಿ ಇನ್ನೆಷ್ಟೋ ಮಂದಿ ಅವರ ಅನುಯಾಯಿಗಳಾದರು. ಜ್ಯೋತಿಬಾ ಫುಲೆ ಅವರು 1890 ವರ್ಷದ ನವೆಂಬರ್ 28 ರಂದು ನಿಧನರಾದರು. ಫುಲೆಯವರು ಹುಟ್ಟುಹಾಕಿದ ಚಳುವಳಿ ಬಿರುಸಿನಿಂದ ಮುಂದುವರೆದು ಫುಲೆಯವರ ಮರಣದ ನಂತರವೂ ಮುಂದುವರೆಯಿತು.

ಎನ್.ಎನ್.ಕಬ್ಬೂರ, ಶಿಕ್ಷಕರು ತಾ–ಸವದತ್ತಿ ಜಿ–ಬೆಳಗಾವಿ,ಮೊಬೈಲ್–9740043452